## ಗಿಡಗಳಿರಲವ್ವ ಮನೆತುಂಬ

‘ಗಿಡಗಳಿರಲವ್ವ ಮನೆತುಂಬ’ (ಸೀಮಾ ಹೆಗಡೆ, ಆ. 25) ಮುಖಪುಟ ಲೇಖನ ಓದಿದೆ. ನಾನು 2007–08ರಿಂದ ‘ಸುಧಾ’ ವಾರಪತ್ರಿಕೆಯನ್ನು ಓದುತ್ತಿದ್ದೇನೆ. ಈ ಪತ್ರಿಕೆಯೆಂದರೆ ನನಗೆ ತುಂಬ ಪ್ರೀತಿ. ನೀವು ಅದು ಹೇಗೆ ಇಷ್ಟು ಒಳ್ಳೆಯ ಲೇಖನಗಳನ್ನು ಕಲೆಹಾಕುತ್ತೀರೋ ಗೊತ್ತಿಲ್ಲ. ನೀವು ಪ್ರಕಟಿಸುವ ಲೇಖನಗಳು ಹಲವು ಬಾರಿ ನನಗೆ ನನ್ನ ಕುಟುಂಬಕ್ಕೆ ಸಹಾಯಕವಾಗಿವೆ. ಇಂಟೀರಿಯರ್ ಗಾರ್ಡನ್ ಕುರಿತ ಮುಖಪುಟ ಲೇಖನವೂ ತುಂಬ ಚೆನ್ನಾಗಿತ್ತು. ಇನ್ನೂ ಸ್ವಲ್ಪ ವಿವರಗಳನ್ನು ನಾನು ನಿರೀಕ್ಷೆ ಮಾಡಿದ್ದೆ. ಮುಂದಿನ ದಿನಗಳಲ್ಲಿ ಈ ವಿಷಯದ ಬಗ್ಗೆ ಇನ್ನಷ್ಟು ಲೇಖನಗಳು ಬರುತ್ತವೆ ಎಂದು ಆಶಿಸುತ್ತೇನೆ. ಯಾಕೆಂದರೆ ‘ಸುಧಾ’ ನಮಗೆಂದೂ ನಿರಾಸೆ ಮಾಡುವುದಿಲ್ಲ.

—ಆರೀಫ್ ಖಾನ್



ಮುಖಪುಟ ಲೇಖನ ಅತ್ಯುತ್ತಮ ವೈಜ್ಞಾನಿಕ ಮಾಹಿತಿಯನ್ನು ಒಳಗೊಂಡಿತ್ತು. ಸರಳ ಭಾಷೆಯಲ್ಲಿ ಒಳಾಂಗಣ ಸಸ್ಯಗಳ ಬೆಳವಣಿಗೆ ಮತ್ತು ನಿರ್ವಹಣೆ ಬಗ್ಗೆಯಿದ್ದ ಲೇಖನ ನನ್ನಂತಹ ಕೈತೋಟ ಆಸಕ್ತರಿಗೆ ಬಹು ಉಪಯುಕ್ತವಾಗಿತ್ತು. ಒಳಾಂಗಣ ಸಸ್ಯಗಳ ಕೋಷ್ಟಕವು ಇಷ್ಟವಾಯಿತು.

—ಎಸ್. ಶಿಶುಪಾಲ, ದಾವಣಗೆರೆ

ಹಸಿರು ಹೊಸ ಜೀವನವನ್ನು ಸೂಚಿಸುತ್ತದೆ. ನಾನು ಕೂಡ ನಮ್ಮ ಮನೆಯಲ್ಲಿ ಇಂಟೀರಿಯರ್ ಗಾರ್ಡನ್ ಮಾಡಿದ್ದೇನೆ ಮತ್ತು ಸಕ್ಯುಲೆಂಟ್ಸ್ ಗಿಡಗಳನ್ನು ಕೂಡ ಬೆಳೆಸಿದ್ದೇನೆ. ಇವು ಮನೆಯ ಸೊಬಗಿಗೆ ನವ ಚೈತನ್ಯ ನೀಡಿವೆ. ಸಕ್ಯುಲೆಂಟ್ಸ್ ಕೆಲವೇ ದಿನಗಳಲ್ಲಿ ಬಾಡಿ ಹೋಗುತ್ತಿದ್ದವು. ಈ ಲೇಖನವು ಗಿಡಗಳನ್ನು ಬೆಳೆಸಲು ಅನೇಕ ಸಲಹೆ ಮತ್ತು ಮಾದರಿಗಳನ್ನು ನೀಡಿದೆ.

—ಸುದರ್ಶನ್, ಬೆಂಗಳೂರು

‘ಗಿಡಗಳಿರಲವ್ವ ಮನೆತುಂಬ’ ಬರಹದಲ್ಲಿ ಲೇಖಕಿ, ಈಗಿನ ಸ್ವತಂತ್ರ ನಿವೇಶನ ಕಡಿಮೆಯಾಗಿ ಅಪಾರ್ಟ್‌ಮೆಂಟ್ ಮೇಲೆ ಜನರ ಒಲವಿರುವಾಗ ಒಳಾಂಗಣ, ಹೊರಾಂಗಣ ಸಸ್ಯಗಳ ಬೆಳೆಸುವಿಕೆ, ಅವುಗಳ ಪೋಷಣೆ ಬಗ್ಗೆ ತುಂಬಾ ಚೆನ್ನಾಗಿ ನಿರೂಪಿಸಿದ್ದಾರೆ. ಈಗ ಎಲ್ಲಾ ಕಡೆ ಹಸಿರು ಕಮ್ಮಿಯಾಗಿರುವ ಸಂದರ್ಭದಲ್ಲಿ ಮನೆಯೊಳಗೆ ಗಿಡಗಳನ್ನು ಬೆಳೆಸುವ ಪ್ರಯತ್ನ ನಿಜಕ್ಕೂ ಒಳ್ಳೆಯ ಬೆಳವಣಿಗೆ. ಈ ವಾರದ ‘ಸುಧಾ’ ಪತ್ರಿಕೆಯಲ್ಲಿ ಬಂದಿರುವ ಎಲ್ಲಾ ಲೇಖನಗಳು ಸಂಗ್ರಹಯೋಗ್ಯ.

— ಭಾರತೀ ಗಂಗಾಧರ್, ಬೆಂಗಳೂರು

## ಹರಾಜು

‘ಹರಾಜು’ (ನಾಗರಾಜ ಶೆಟ್ಟಿ, ಆ. 25) ಕಥೆ ಓದಿದೆ. ಸರಕಾರಿ ಕಚೇರಿಗಳಲ್ಲಿ ನಡೆಯುವ ಅವ್ಯವಹಾರಗಳನ್ನು ಭೇದಿಸಲು ನಡೆಯುವ ಇಲಾಖಾ ವಿಚಾರಣೆಗಳು ಕೆಲವೊಮ್ಮೆ ಕಣ್ಣೊರೆಸುವ ನಾಟಕಗಳಾಗಿರುತ್ತವೆ. ಬಹಳಷ್ಟು ಸಲ ಆಡಳಿತ ಮಂಡಳಿಯ ಇಷ್ಟದ ಪ್ರಕಾರವೇ ಇತ್ಯರ್ಥವಾಗುವುದುಂಟು. (ಒಂದೊಮ್ಮೆ ಅಪರಾಧ ಮಾಡಿಯೂ ಸಿಕ್ಕಿ ಹಾಕಿಕೊಳ್ಳದೇ ಇರುವ) ಸಹೋದ್ಯೋಗಿಗಳಿಂದ ಆರೋಪಿತ ಸಿಬ್ಬಂದಿ ಮುಂದೆ ಸೇವಾವಧಿಯುದ್ದಕ್ಕೂ ಅನುಭವಿಸಬೇಕಾದ ನೋವು, ಅವಮಾನಗಳ ವಾಸ್ತವತೆಯನ್ನು ‘ಹರಾಜು’ ಕಥೆಯಲ್ಲಿ ಲೇಖಕರು ಸಮರ್ಥವಾಗಿ ಬಿಂಬಿಸಿದ್ದಾರೆ.



—ರಾಮಚಂದ್ರ ಎಂ.ಆರ್., ಬೆಂಗಳೂರು

## ‘ದಹಿಹಂಡಿ’ಗಾಗಿ ಮಾನವ ಮಿನಾರ್

‘ದಹಿಹಂಡಿಗಾಗಿ ಮಾನವ ಮಿನಾರ್’ (ಶ್ರೀನಿವಾಸ ಜೋಕಟ್ಟೆ, ಆ. 25) ಲೇಖನ ಚೆನ್ನಾಗಿತ್ತು. ಮುಂಬಯಿಯ ‘ಗೋವಿಂದಾ…’ ತಂಡಗಳಲ್ಲಿ ಮುಸ್ಲಿಂ ಸದಸ್ಯರೂ ಇರುವರೆಂಬ ವೈಶಿಷ್ಟ್ಯವನ್ನು ಎತ್ತಿ ಹಿಡಿದು, ಗೋಕುಲಾಷ್ಟಮಿಯ ಮರುದಿನ ಮುಂಬೈ ಗಲ್ಲಿಗಳಲ್ಲಿ ಆಚರಿಸಲ್ಪಡುವ ಉತ್ಸವದ ಬಗ್ಗೆ ಲೇಖಕರು ಸಾಂದರ್ಭಿಕ ಬೆಳಕು ಚೆಲ್ಲಿದ್ದಾರೆ.



ಈ ಸ್ಪರ್ಧೆಗೆ ರಾಜಕೀಯ ಪಕ್ಷಗಳು 25 ಲಕ್ಷ ರೂಪಾಯಿಗಳವರೆಗೂ ಬಹುಮಾನ ನೀಡುತ್ತಿರುವುದು ಅಚ್ಚರಿಯ ವಿಷಯವಾಗಿದೆ. ಮೊಸರುಕುಡಿಕೆ ಸ್ಪರ್ಧೆಗೆ ಮಹಾರಾಷ್ಟ್ರ ಸರಕಾರವು ಸಾಹಸ ಕ್ರೀಡೆಯ ಮಾನ್ಯತೆ ನೀಡಿರುವುದರ ಜೊತೆಗೆ ‘ಗೋವಿಂದಾ’ ಸದಸ್ಯರಿಗೆ ಸರಕಾರಿ ಉದ್ಯೋಗಾವಕಾಶ ನೀಡುವ ನಿರ್ಧಾರ ಕೈಗೊಂಡಿರುವುದು ಇನ್ನೊಂದು ವಿಶೇಷವಾಗಿದೆ!

—ರಮಣ್ ಶೆಟ್ಟಿ ರೆಂಜಾಳ್, ಮುಂಬಯಿ

## ಮನೋಜ್ಞ ಬರಹ

ಕೊಡೆಯ ಬಿಡೆ (ಲತಾ ಹೆಗಡೆ, ಆ. 25) ಬರಹ ಚೆನ್ನಾಗಿದೆ. ಮಳೆಗಾಲದ ಈ ಸಮಯದಲ್ಲಿ ಚೂಪು ಕೊಡೆಯ ಉಪಯುಕ್ತತೆ ಮತ್ತು ಚಿಕ್ಕವರಿದ್ದಾಗ ಅದರ ಭಯ ಮನೋಜ್ಞವಾಗಿ ತಮ್ಮದಾದ ಶೈಲಿಯಲ್ಲಿ ಓದುಗರ ಮುಂದಿಟ್ಟಿದ್ದಾರೆ.

— ಶಾಂತ ಕುಮಾರ್, ಸರ್ಜಾಪುರ

## ಅದ್ಭುತ ವಿವರಣೆ

‘ಸಮುದ್ರ ಮಹಾಫಲ’ದ (ವಿನು ಗಂಗೆ, ಸೆ. 1 ಸಂಚಿಕೆ) ಬಗೆಗಿನ ಲೇಖನ ಅದ್ಭುತ ವಿವರಣೆಯಿಂದ ಕೂಡಿದೆ. ಈ ಮಾಹಿತಿ ಖಂಡಿತ ಬಹಳ ಜನರಿಗೆ ಗೊತ್ತಿಲ್ಲ. ಈ ತರಹ ವಿವರಣಾತ್ಮಕ ಲೇಖನಗಳನ್ನು ಪ್ರಕಟಿಸಿ.

— ವೀಣಾ ಆರ್. ಬೆಂಗಳೂರು

## ಗಣೇಶನ ಹಬ್ಬಕ್ಕೆ ಗೌರಿ ಹೂವು

‘ಗಣೇಶನ ಹಬ್ಬಕ್ಕೆ ಗೌರಿ ಹೂವು’ (ರಾಜಶೇಖರ ಡೊಂಬರಮತ್ತೂರ, ಆ.25) ಲೇಖನ ಮಾಹಿತಿಪೂರ್ಣವಾಗಿದೆ. ‘ಬೆಳ್ಳಗಿರುವುದೆಲ್ಲ ಹಾಲಲ್ಲ’ ಎಂಬ ಗಾದೆ ಮಾತು ಈ ಸಸ್ಯಕ್ಕೆ ಸರಿಯಾಗಿ ಅನ್ವಯಿಸುತ್ತದೆ. ಈ ಸಸ್ಯವು ವಿಷಕಾರಿ ಹಾಗೂ ಔಷಧಕಾರಿಯಾಗಿದೆ. ಈ ಲೇಖನದಿಂದಾಗಿ ನಮ್ಮ ಸುತ್ತ ಮುತ್ತಲಿನಲ್ಲಿಯೇ ಇರುವ, ನನ್ನ ಕಣ್ಮುಂದೆಯೇ ನರ್ತಿಸುತ್ತಿರುವ ಒಂದು ಹೂವಿನ ಪರಿಚಯವು ನನಗಾಯಿತು.



—ಜೀವನ್ ಸಂತೋಷ್, ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in